ಯಾರೊಂದಿಗೂ ಹೇಳಿಕೊಳ್ಳಲಾಗದ ಅಸಹಾಯಕತೆ ತಂದಿಟ್ಟ ಈ ಮಾನ ಬೀದಿಯಲ್ಲಿ ಬಿಕರಿಯಾಗುವ ಸಂಕಟವನ್ನು ಸುರಭಿಯ ಮುಖಕ್ಕೆ ಕಾರಿಕೊಂಡಿದ್ದಳು. ಅವಳ ಒಡಲ ಸಂಕಟ ಮಾತಾಗಿ, ಕಣ್ಣೀರಾಗಿ ಸಿಡಿದಾಗ ರಂಗರಾವ್ ಹೆಂಡತಿ ವೇದವಲ್ಲಿಯ ಅಸಹಾಯಕತೆ ಮಾತ್ರ ಉಳಿಯಿತು. ಹತ್ತಿರ ಬಂದು ಒತ್ತಿ ಬಳಸಿಕೊಂಡು ಒಳಗೆ ಕರೆದೊಯ್ದಳು. '...ನೀನಿಲ್ಲಿ ಜಾಸ್ತಿ ಹೊತ್ತಿರಬೇಡ. ಸುದ್ದಿವಾಹಿನಿಯವ್ರ ಕಣ್ಣಿಗೆ ಬಿದ್ದರೆ ಅಷ್ಟೇ. ಈಗಾದದ್ದು ಏನೇನೂ ಅಲ್ಲ! ಎಲ್ರೂ ಕೆಟ್ಟವರಲ್ಲ. ನನ್ನ ತವರಿನ ಕಡೆ ನಿರ್ದೇಶಕರೊಬ್ರಿದಾರೆ. ಅಪರಾಧಿಪ್ರಜ್ಞೆಯಿಂದ ಮಾಡತಿದೀನಿ; ಭರವಸೆ ಕೊಡಲ್ಲ. ತುಂಬಾ ಸ್ಟ್ರಿಕ್ಟು, ನಿನ್ನ ಪ್ರಯತ್ನ ಮಾಡು; ಆಮೇಲೆ ಅದೃಷ್ಟ. ಈಗ ಎರಡು ದಿನದಿಂದ ಜ್ಞಾನಭಾರತಿ ಲೊಕೇಶನ್‌ನಲ್ಲಿದಾರೆ... ಹೊರಟುಬಿಡು.' ತ್ವರೆ ಮಾಡುತ್ತ ಕಾಗದದ ಚೂರಲ್ಲಿ ಏನೋ ಬರೆದುಕೊಟ್ಟಳು. ದಾಪುಗಾಲಲ್ಲಿ ಗೇಟಿಂದ ಹೊರಬಂದವಳಿನ್ನೂ ಆಘಾತದಿಂದ ಪೂರ್ತಿ ಚೇತರಿಸಿಕೊಂಡಿರಲಿಲ್ಲ. ತಲೆತಗ್ಗಿಸಿ ದೂರ ದೂರವಾಗುತ್ತ ಬಸ್ ಸ್ಟಾಪೊಂದರಲ್ಲಿ ಕಾಯತ್ತ ನಿಂತ ಜನರ ಗುಂಪಲ್ಲಿ ಸೇರಿಕೊಂಡಳು. ಐದು ನಿಮಿಷ ಕಳೆದವಳಿಗೆ ಕೊಂಚ ಸುರಕ್ಷೆಯ ಭಾವ ಬಂತು. ಕಾಗದ ಬಿಡಿಸಿ ನೋಡಿದಳು. ವಿಳಾಸವಿತ್ತು, ಕೆಳಗೆ 'ವೇದವಲ್ಲಿ ಕಳಿಸ್ತಿದೀನಿ' ಗಡಿಬಿಡಿಯಲ್ಲಿ ಬರೆದ ಸಾಲಿತ್ತು. ಈಗ ಗಮನಕ್ಕೆ ಬಂತು: ಚೀಟಿಯ ಜತೆ ಐದುನೂರು ರೂಪಾಯಿಯ ಒಂದು ನೋಟಿತ್ತು. ಕೆಟ್ಟ ಅನುಭವ ಹೋಗಲೋ ಬಿಡಲೋ ಎಂಬ ತಳಮಳಕ್ಕೆ ದೂಡಿತ್ತು. ಮೊದಲು ಇಲ್ಲಿಂದ ದೂರವಾಗಬೇಕು ಅನಿಸಿ ರಿಕ್ಷಾ ನಿಲ್ಲಿಸಿ ಜ್ಞಾನಭಾರತಿ ಅಂದಳು. ಅದೃಷ್ಟಕ್ಕೆ ಕ್ಯಾಂಪಸ್ಸಿನ ರಸ್ತೆ ಪಕ್ಕದಲ್ಲೇ ಹತ್ತುಮಾರಿನಲ್ಲಿ ಗಿಡಮರಗಳ ನಡುವೆ ಕ್ಯಾಮೆರಾ ಚಟುವಟಿಕೆ ಜನರ ಚಲನವಲನ ಕಾಣಿಸಿ, ರಿಕ್ಷಾದಿಂದ ಇಳಿದು ಸುತ್ತನೆರೆದ ಜನರ ನಡುವೆ ತೂರಿಕೊಂಡಳು. ಚಿತ್ರೀಕರಣ ನಡೆದಿತ್ತು. ಹುಡುಗ ಮತ್ತು ಹುಡುಗಿ ಪ್ರೇಮಿಗಳು. ಕ್ಲಾಸಿಗೆ ಚಕ್ಕರ್ ಹೊಡೆದು ಪಾರ್ಕಿನಲ್ಲಿ ಸೇರೋ ಸೀನು. ಹೀರೋ ಹೀರೋಯಿನ್ ಮರದಡಿ ಕುಳಿತಿದ್ದರು. 'ಲೈಟ್' ಅಂದ ಕೂಡಲೆ ಬೇಕಾದ ಕೋನದಿಂದ ಪ್ರಕಾಶ ಬಿತ್ತು. 'ಕ್ಯಾಮರ, 'ಆ್ಯಕ್ಷನ್' ಅಂದರು ಖುರ್ಚಿಯ ಮೇಲೆ ಕುಳಿತವರು. 'ಏನೆ ಶಮಂತಕಾ, ಇಷ್ಟು ಆತುರ ಕ್ಲಾಸಿಗೆ ಹೋಗಕ್ಕೆ? ಕ್ಲಾಸಿಂದೊ ಇಲ್ಲಾ ಕ್ಲಾಸು ತಗಳೋವರದ್ದೋ ಅಟ್ರಾಕ್ಷನ್ನು ನಿಂಗೆ?' ಹೀರೋ ಕೇಳಿದ. 'ಏ... ಹೋಗೋ. ಹೀಗೇ ಹೇಳಿ ನನ್ನ ಸೋಲ್ಸಿಬಿಡತೀಯ. ಹೀಗೇ ಕ್ಲಾಸು ತಪ್ಪಿಸಿಕೊಂಡ್ರೆ ನಂಗೆ ಮೆಡಿಕಲ್ ಸೀಟು ಕನಸು, ನಿನ್ನ ಮದ್ವೆಯಾಗಿ ಮನೇಲಿರ್ಬೇಕಷ್ಟೆ...' ಅನ್ನುತ್ತಾ ಹೀರೋನ ಎದೆಗೊರಗಿದಳು. ಹೀರೋ ತೋಳಲ್ಲಿ ಬಳಸಿದ. 'ಕಟ್' ಅಂದ ಅದೇ ವ್ಯಕ್ತಿ ಎದ್ದು ಕ್ಯಾಮರಾ ಹತ್ತಿರ ಹೋಗಿ ಏನೇನೋ ಸೂಚನೆ ಕೊಟ್ಟರು. ಆಮೇಲೆ ಹೀರೋಯಿನ್‌ಗೆ ಏನೋ ಹೇಳಿದರು. ಅವಳು ಚುನ್ನಿಯ ಒಂದು ತುದಿಯನ್ನು ನೆಲದ ಮೇಲು ಮತ್ತೊಂದು ತುದಿಯನ್ನು ಭುಜದ ಮೇಲೂ ಇರವಂತೆ ಮಾಡಿಕೊಂಡು ಮತ್ತೆ ಅಭಿನಯಿಸಿದರು. ಈಗ ಆಲಿಂಗನ ಮಾದಕವಾಗಿ ಬಂತು ಆದರೆ ಡೈಲಾಗಿನಲ್ಲಿ ಕಸುವಿಲ್ಲ ಅನಿಸಿತು ನಿರ್ದೇಶಕರಿಗೆ. ಐದು ನಿಮಿಷ ಬಿಟ್ಟು ಮತ್ತೆ ಟೇಕ್ ಆಯ್ತು. ತಲೆಕೊಡವಿದರು, ಇಲ್ಲ ಎಂಬಂತೆ. ಆರನೇ ಸಾರಿ ಹೀರೋಯಿನ್ ಎದೆಗೊರಗಿದಾಗ ಅವಳ ಕೂದಲು ಕೆನ್ನೆಯಮೇಲೆ ಹಾಯ್ದು ಹೀರೋನ ಭುಜಕ್ಕೆ ಮುತ್ತಿಕ್ಕಿತು. ಎಲ್ಲ ಓಕೆ ಆಯಿತು. ಇಷ್ಟು ತಾನು ಚಿಟಿಕೆ ಹೊಡೆದಂತೆ ಮಾಡಬಲ್ಲೆ, ಸುಲಭ ಅನಿಸಿತು ಸುರಭಿಗೆ. ಮಧ್ಯಂತರದಲ್ಲಿ ನಿರ್ದೇಶಕರು ಕಾಫಿಕಪ್ಪು ಹಿಡಿದು ಒಬ್ಬರೆ ಇದ್ದ ಸಮಯನೋಡಿ ತಟ್ಟನೆ ಧಾವಿಸಿ ಚೀಟಿ ಕೊಟ್ಟು, 'ಸಾರ್, ವೇದವಲ್ಲಿ ಕಳಿಸಿದ್ರು...' ಅಂದಳು ವಿನಯದಿಂದ. ಒಂದುಕ್ಷಣ ಚೀಟಿಯನ್ನೂ ಅವಳನ್ನೂ ನೋಡಿ 'ಹಾಂ... ಹೌದು, ವೇದ ಫೋನು ಮಾಡಿದ್ಳು...' ಅಂತ ತಮ್ಮಲ್ಲೆ ಹೇಳಿಕೊಂಡವರು ಪಾದದಿಂದ ತಲೆಯವರೆಗೆ ನೋಡಿ